ಪ್ರಜಾವಾಣಿ

# 'ಕೇಂದ್ರದಲ್ಲಿ ಪ್ರಾದೇಶಿಕ ಪಕ್ಷಗಳೇ ನಿರ್ಣಾಯಕ'

ಪ್ರಜಾವಾಣಿ ವಾರ್ತೆ



ನಗರದಲ್ಲಿ ಶುಕ್ರವಾರ ನಡೆದ 'ರಾಷ್ಟ್ರೀಯ ರಾಜಕಾರಣದ ಕೇಂದ್ರವಾಗಿ ರಾಜ್ಯಗಳು' ಕುರಿತ ಕಾರ್ಯಾಗಾರದಲ್ಲಿ ಶುಕ್ರವಾರ ಲೋಕನೀತಿ ಸಂಸ್ಥೆಯ ಸಂಶೋಧಕ ಡಾ. ಸಂಜಯ್‌ಕುಮಾರ್ ಮಾತನಾಡಿದರು. ಪ್ರೊ. ರಾಜೀವ್ ಗೌಡ ಮತ್ತು ಜೈನ್ ವಿ.ವಿ ಸಹ ಕುಲಪತಿ ಸಂದೀಪ ಶಾಸ್ತ್ರಿ ಚಿತ್ರದಲ್ಲಿದ್ದಾರೆ —ಪ್ರಜಾವಾಣಿ ಚಿತ್ರ

ಬೆಂಗಳೂರು: 'ದೇಶದ ಹಿಂದಿನ 25 ವರ್ಷಗಳ ರಾಜಕೀಯ ಪ್ರವಾಹದಲ್ಲಿ ಪ್ರಾದೇಶಿಕ ಪಕ್ಷಗಳು ದೈತ್ಯ ಶಕ್ತಿಯಾಗಿ ಹೊರಹೊಮ್ಮಿದ್ದು, ಸದ್ಯದ ಸ್ಥಿತಿಯಲ್ಲಿ ಅವುಗಳ ಸಹಭಾಗಿತ್ವವಿಲ್ಲದೆ ಕೇಂದ್ರದಲ್ಲಿ ಸರ್ಕಾರ ರಚನೆ ಅಸಾಧ್ಯ' ಎಂದು ಹಿರಿಯ ರಾಜಕೀಯ ವಿಶ್ಲೇಷಕ, ಜೈನ್ ವಿಶ್ವವಿದ್ಯಾಲಯದ ಸಹ ಕುಲಪತಿ ಸಂದೀಪ ಶಾಸ್ತ್ರಿ ಪ್ರತಿಪಾದಿಸಿದರು.

ಜೈನ್ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನ ಹಾಗೂ ಶಿಕ್ಷಣ ಸಂಶೋಧನಾ ಕೇಂದ್ರದ ವತಿಯಿಂದ ಏರ್ಪಡಿಸಿರುವ 'ರಾಷ್ಟ್ರೀಯ ರಾಜಕಾರಣದ ಕೇಂದ್ರವಾಗಿ ರಾಜ್ಯಗಳು' ಕುರಿತ ಕಾರ್ಯಾಗಾರದಲ್ಲಿ ಶುಕ್ರವಾರ ಅವರು ಮಾತನಾಡಿದರು.

'1989ರ ಸಾರ್ವತ್ರಿಕ ಚುನಾವಣೆ ನಂತರದ ಅವಧಿಯಲ್ಲಿ ಪ್ರಾದೇಶಿಕ ಪಕ್ಷಗಳು ಅಗಾಧವಾಗಿ ಬೆಳೆಯುತ್ತಲೇ ಹೊರಟಿವೆ. ಆಗ ಪ್ರಾದೇಶಿಕ ಪಕ್ಷಗಳ ಸಂಖ್ಯೆ ಕೇವಲ 17 ಇತ್ತು. ಈಗ ಅವುಗಳ ಸಂಖ್ಯೆ 30ಕ್ಕೆ ಏರಿದೆ' ಎಂದು ಹೇಳಿದರು.

'ಆಗ 46 ಸೀಟುಗಳನ್ನಷ್ಟೇ ಹೊಂದಿದ್ದ ಪ್ರಾದೇಶಿಕ ಪಕ್ಷಗಳು 2009ರ ಹೊತ್ತಿಗೆ 152 ಸ್ಥಾನ ಪಡೆದಿದ್ದು, ಮತ ಗಳಿಕೆ ಪ್ರಮಾಣ ಸಹ ಶೇ 15.4ರಿಂದ ಶೇ 29.2ಕ್ಕೆ ಹೆಚ್ಚಿದೆ' ಎಂದು ವಿವರಿಸಿದರು.

'ಎರಡೂವರೆ ದಶಕಗಳ ಅವಧಿಯಲ್ಲಿ ರಾಷ್ಟ್ರೀಯ ಪಕ್ಷಗಳು ಮತ ಗಳಿಕೆ ಪ್ರಮಾಣದಲ್ಲಿ ಶೇ 79.3ರಿಂದ ಶೇ 63.6ಕ್ಕೆ ಹಿನ್ನಡೆ ಅನುಭವಿಸಿವೆ' ಎಂದು ವಿಶ್ಲೇಷಿಸಿದರು.

'ಲೋಕನೀತಿ ಮತ್ತು ಅಭಿವೃದ್ಧಿ ಹೊಂದುತ್ತಿರುವ ಸಮಾಜಗಳ ಅಧ್ಯಯನ ಕೇಂದ್ರ (ಸಿಎಸ್‌ಡಿಎಸ್) ಸಂಸ್ಥೆಗಳು ಒಟ್ಟಾಗಿ ಈಗಾಗಲೇ 18 ರಾಜ್ಯಗಳಲ್ಲಿ ಮತಗಳ ಜಾಡಿನ ಅಧ್ಯಯನ ನಡೆಸಿವೆ. ದಕ್ಷಿಣ ಹಾಗೂ ಪೂರ್ವದ ರಾಜ್ಯಗಳಲ್ಲಿ ಸ್ಥಳೀಯ ಪಕ್ಷಗಳೇ ಮುಂಚೂಣಿಯಲ್ಲಿವೆ' ಎಂದು ತಿಳಿಸಿದರು.

'ಬಿಹಾರದಲ್ಲಿ ಮಾತ್ರ ನಿತೀಶ್ ಕುಮಾರ್ ಅವರ ಜೆಡಿಯು ಹಿನ್ನಡೆ ಅನುಭವಿಸುತ್ತಿದೆ. ನಿತೀಶ್ ತಮ್ಮ ರಾಜ್ಯಕ್ಕೆ ಸೀಮಿತವಾಗಿ ಇರಬೇಕು ಎನ್ನುವುದು ಅಲ್ಲಿನ ಜನರ ಅಭಿಪ್ರಾಯವಾಗಿದೆ. ಇದರ ಲಾಭ ಬಿಜೆಪಿಗೆ ಸಿಗುವ ಸಾಧ್ಯತೆ ಹೆಚ್ಚಾಗಿದೆ' ಎಂದು ಹೇಳಿದರು.

'ರಾಜ್ಯ ಸರ್ಕಾರಗಳು ಉತ್ತಮವಾಗಿ ಕೆಲಸ ಮಾಡುತ್ತಿರುವ ಪ್ರದೇಶಗಳಲ್ಲಿ ಲೋಕಸಭೆ ಚುನಾವಣೆಯಲ್ಲಿ ಆಡಳಿತ ಪಕ್ಷಗಳ ಪರ ಜನರ ಒಲವು ಕಾಣುತ್ತಿದೆ. ಕಳಪೆ ಸಾಧನೆ ತೋರಿದ ಪಕ್ಷಗಳಿಗೆ ಪಾಠ ಕಲಿಸಲೂ ಜನ ಸಜ್ಜಾಗಿದ್ದಾರೆ' ಎಂದು ವಿವರಿಸಿದರು. 'ರಾಷ್ಟ್ರೀಯ ಪಕ್ಷಗಳು ಉಂಟು ಮಾಡಿರುವ ಭ್ರಮನಿರಸನದಿಂದ ಖಾಲಿಯಾಗಿರುವ ಜಾಗ ತುಂಬಲು ಆಮ್ ಆದ್ಮಿ ಪಕ್ಷ ಹವಣಿಸುತ್ತಿದೆ' ಎಂದು ಹೇಳಿದರು.

ಲೋಕನೀತಿ ಸಂಸ್ಥೆಯ ಸಂಶೋಧಕ ಡಾ. ಸಂಜಯ್‌ಕುಮಾರ್, 'ಪ್ರಾದೇಶಿಕ ಪಕ್ಷಗಳಿಗೆ ಗ್ರಾಮಾಂತರ ಭಾಗದಲ್ಲಿ ಗಟ್ಟಿಯಾದ ನೆಲೆಯಿದ್ದು, ಹಿಂದುಳಿದ ವರ್ಗ ಹಾಗೂ ದಲಿತ ಸಮುದಾಯದ ಮತದಾರರು ಈ ಪಕ್ಷಗಳಿಗೆ ಬಲ ತುಂಬಿದ್ದಾರೆ' ಎಂದು ಪ್ರತಿಪಾದಿಸಿದರು.

'ಚುನಾವಣೆಯಿಂದ ಚುನಾವಣೆಗೆ ಪ್ರಾದೇಶಿಕ ಪಕ್ಷಗಳು ಬಲಿಷ್ಠವಾಗುತ್ತಲೇ ಹೊರಟಿವೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಶೇ 31.1ರಷ್ಟು ಮತಗಳನ್ನು ಈ ಪಕ್ಷಗಳು ಪಡೆದಿದ್ದು, ಗ್ರಾಮಾಂತರ ಭಾಗದಲ್ಲಿ 104, ಅರೆ ನಗರ ಪ್ರದೇಶಗಳಲ್ಲಿ 32 ಮತ್ತು ನಗರ ಪ್ರದೇಶಗಳಲ್ಲಿ 16 ಸೀಟುಗಳನ್ನು ಜಯಿಸಿದ್ದವು' ಎಂದು ವಿವರಿಸಿದರು.

'ಕರ್ನಾಟಕದಲ್ಲಿ ಜೆಡಿಎಸ್ ಗ್ರಾಮೀಣ ಭಾಗದಲ್ಲಿ ಶೇ 18.8ರಷ್ಟು ಮತ ಸೆಳೆದರೆ, ನಗರ ಪ್ರದೇಶದಲ್ಲಿ ಶೇ 11ರಷ್ಟು ಮತ ಪಡೆಯಲಷ್ಟೇ ಯಶಸ್ವಿಯಾಗಿದೆ' ಎಂದು ವಿಶ್ಲೇಷಿಸಿದರು. 'ಪಶ್ಚಿಮ ಬಂಗಾಳದಲ್ಲಿ ಮಾತ್ರ ಈ ಪ್ರವೃತ್ತಿ ತಿರುವು–ಮುರುವಾಗಿದ್ದು, ಪ್ರಾದೇಶಿಕ ಪಕ್ಷವಾದ ತೃಣಮೂಲ ಕಾಂಗ್ರೆಸ್ ನಗರ ಪ್ರದೇಶದಲ್ಲೇ ಹೆಚ್ಚಿನ ಮತ ಗಳಿಸಿದೆ' ಎಂದು ಅವರು ಹೇಳಿದರು.